ಹಳೆಯ ಮಂತ್ತು ಹೂಳು ತುಂಬುವ ಕೆರೆಗಳ ಜೀರ್ಣೋದ್ಧಾರಕ್ಕೆ ಮಾಸ್ಟರ್ ಪ್ಲಾನ್

೧೨೨೬. ಶ್ರೀ ಆರ್. ರಾಮಯ್ಯ(ಹಿರಿಯೂರು).—ಮಾನ್ಯ ಲೋಕೋಪಯೋಗಿ ಜಲಾಶಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೮ ೦೦,೦೦೦ ಎಕರೆಗಳಿಗೆ ನೀರಾವರಿ ಒದಗಿಸಲು ರೂಪಿಕವಾದ ರಾಜ್ಯದ ೨೬,೦೦೦ ಸಣ್ಣ ಹಳೆಯ ಮತ್ತು ಹೂಳು ತುಂಬಿದ ಕೆರೆಗಳ ಜೀರ್ಣೋದ್ಧಾರಕ್ಕೆ ಒಂದು ಮಾಸ್ಟರ್ ಪ್ಲಾನನ್ನು ಸಿದ್ಧ ಗೊಳಿಸಲಾಗಿತ್ತೆಂಬುದು ನಿಜವೆ?

ಆ) ಇವುಗಳಲ್ಲಿ ಇದುವರೆಗೂ ಆವುಗಳ ಆಚ್ಚುಕಟ್ಟನ್ನು ಅಭಿವೃದ್ಧಿಪಡಿಸುವ ಸಾಮರ್ಥ್ಯವನ್ನು ರೂಢಿಸಲು ಎಷ್ಟು ಕೆರೆಗಳನ್ನು ಜೀರ್ಣೋದ್ಧಾರ ಮಾಡಲಾಗಿದೆ ಮತ್ತು ಅವುಗಳು ಕೆಲಸ ಮಾಡುವ ಸ್ಥಿತಿಗತಿಗಳೇನು?

ಇ) ಸಣ್ಣ ನೀರಾವರಿ ಜೀರ್ಣೋದ್ಧಾರ ಕಾಯಿದೆ ಎಂದಾದರೂ ಇತ್ತೇ? ಮಂತ್ತು ಇನ್ನೂ ಜಾರಿಯಲ್ಲಿದೆಯೇ?

ಈ) ಸಣ್ಣ ನೀರಾವರಿ ಕೆರೆಗಳ ಜೀರ್ಣೋದ್ಧಾರ ಸಮಿತಿಯು ಎರಡು ಬಾರಿ ರಚಿಸಲ್ಪಟ್ಟಿದ್ದು ನಿಜವೇ? ಹಾಗಿದ್ದಲ್ಲಿ ರಚಿತವಾದ ದಿನಾಂಕ ಮತ್ತು ಸಮಿತಿಯ ಉದ್ದೇಶ ಮತ್ತು ಸದಸ್ಯರುಗಳ ಹೆಸರುಗಳೇನು?

ಉ) ಮೇಲ್ಕಂಡ ಸಮಿತಿಯ ವರದಿ ಮತ್ತು ಶಿಫಾರಸ್ಸುಗಳನ್ನು ಒದಗಿಸಲಾಗುತ್ತದೆಯೇ?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಅಂತಹ ಕಾಯಿದೆ ಇಲ್ಲ.

ಈ) ಯಾವ ಸಮಿತಿಯೂ ರಚಿಸಲ್ಪಟ್ಟಿಲ್ಲ.

ಉ) ಉದ್ಭವಿಸುವುದಿಲ್ಲ.

ಸಣ್ಣ ನೀರಾವರಿ ಕೆರೆಗಳ ಜೀರ್ಣೋದ್ಧಾರ ಸಮಿತಿಯ ಬಗ್ಗೆ

೧೨೦೩. ಶ್ರೀ ಆರ್. ರಾಮಯ್ಯ (ಹಿರಿಯೂರು)— ಮಾನ್ಯ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ನೀರಾವರಿ ಕೆರೆಗಳ ಜೀರ್ಣೋದ್ಧಾರ ಸಮಿತಿಯು ರಾಜ್ಯದಲ್ಲಿ ಅದರ ನಡವಳಿಕೆಗಳನ್ನು ಯಾವಾಗ ಸಮಾಪ್ತಿಗೊಳಿಸಿತು, ವರದಿಯ ಪ್ರತಿಯೆನ್ನು ಒದಗಿಸುವುದು,

ಆ) ಸಮಿತಿಯ ಶಿಫಾರಸ್ಸುಗಳ ವಿವರಗಳನ್ನು ಒದಗಿಸುವುದು.

ಇ) ಸಮಿತಿಯ ಕಾರ್ಯಕ್ಕೆ ವಿರ್ಚಾದ ಹಣವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ಅಂತಹ ಯಾವ ಸಮಿತಿಯೂ ರಚಿತವಾಗಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹಿರಿಯೂರು ತಾಲ್ಲೂಕಿನಲ್ಲಿ ಗಾಯಿತ್ರಿ ಜಲಾಶಯವನ್ನು ನಿರ್ಮಿಸುವ ಬಗ್ಗೆ

೧೨೦೦ ಶ್ರೀ ಆರ್. ರಾಮಯ್ಯ (ಹಿರಿಯೂರು) ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರಿಯೂರು ತಾಲ್ಲೂಕು ಗಾಯಿತ್ರಿ ಜಲಾಶಯವನ್ನು ನಿರ್ಮಿಸಿ, ಮುಂಗಿಸಿದ ನಂತರ ಅದರ ಜಲಾನಯನ ಪ್ರದೇಶದಲ್ಲಿ ಕಟ್ಟಲಾದ ಕೆರೆಗಳ ಹೆಸರು

ಆ) ಗಾಯಿತ್ರಿ ಜಲಾಶಯದ ಜಲಾನಯನ ಪ್ರದೇಶದಲ್ಲಿ ಇರುವ ಕೆರೆಗಳಿಗಾಗಿ ತೆಗೆದುಕೊಂಡ ಅಭಿವೃದ್ಧಿ ಕಾರ್ಯಗಳು ಮತ್ತು ಅಂತಹ ಕೆಲಸಗಳಿಂದ ಗಾಯಿತ್ರಿ ಜಲಾಶಯಕ್ಕೆ ಹರಿದು ಬರುವ ನೀರು ಕಮ್ಮಿಯಾಗಿದೆಯೇ?

ಇ) ಆಚ್ಚುಕಟ್ಟು ಪ್ರದೇಶದಲ್ಲಿ ತೊಂದರೆಗೆ ಒಳಗಾದ ರೈತರಿಗೆ ಸರ್ಕಾರವು ಯಾವ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ?